**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ: 01-12-2022.**

**ಪಾಟೀ ಸವಾಲು - 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದ**

4) ನಾನು ಈ ದಾವೆಯನ್ನು ನನ್ನ ಅಕ್ಕಂದಿರು ಮತ್ತು ಅಕ್ಕಂದಿರ ಮಕ್ಕಳ ವಿರುದ್ಧ ಸಲ್ಲಿಸಿದ್ದೇನೆ. ನಾನು ಜಮೀನಿಗೋಸ್ಕರ ದಾವೆ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ಅರಿತುಕೊಡಿಂದ್ದೇನೆ. ನನಗೆ ಇಂಗ್ಲೀಷ್ ಬರುವುದಿಲ್ಲ. ಕನ್ನಡ ಮಾತ್ರ ಗೊತ್ತು. ಇಂಗ್ಲಿಷ್ನಲ್ಲಿರುವ ಪ್ರಮಾಣ ಪತ್ರದ ಬಗ್ಗೆ ಬೇರೆಯವರಿಂದ ತಿಳಿದುಕೊಂಡಿದ್ದೇನೆ. ನಾನೇನು ಖುದಾಗಿ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿ. ನನ್ನ ತಂದೆಗೆ ಇಬ್ಬರು ಗಂಡುಮಕ್ಕಳು ಮತ್ತು ಆರು ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನನ್ನೂ ಸೇರಿಸಿ ಎಲ್ಲಾ ಹೆಣ್ಣು ಮಕ್ಕಳೂ ಮದುವೆಗಳಾಗಿ ಅವರವರ ಗಂಡನ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ಮದುವೆಯಾಗಿ 30 ವರ್ಷಗಳು ಕಳೆದಿದ್ದು, ಆಗಿನಿಂದಲೂ ನಾನು ಗಂಡನ ಮನೆಯಲ್ಲೇ ವಾಸ ಮಾಡುತ್ತಿದ್ದೇನೆ. ನಾನು ತಂದೆ ತಾಯಿಗೆ ಇಷ್ಟವಿಲ್ಲದ ಮದುವೆ ಮಾಡಿಕೂಂಡಿದ್ದರಿಂದ ತವರು ಮನೆಗೆ ಯಾವತ್ತೂ ಹೋಗಿಲ್ಲ, ಉಳಿದ ಹೆಣ್ಣು ಮಕ್ಕಳು ಮಾತ್ರ ತವರು ಮನೆಗೆ ಹೋಗಿ ಬರುವುದು ಮಾಡುತ್ತಾರೆ ಎಂದರೆ ಸರಿಯಲ್ಲ.

5) ನನಗೆ ದಾವಾ ಸ್ವತ್ತುಗಳ ಸರ್ವೆ ನಂಬರುಗಳು ಮತ್ತು ಚೆಕ್ಕುಬಂದಿ ಯಾವುದೂ ಗೊತ್ತಿಲ್ಲ. ದಾವಾ ಅನುಸೂಚಿಯಲ್ಲಿ ನಾನು ಸ್ವತ್ತುಗಳಿಗೆ ಚೆಕ್ಕುಬಂದಿ ನಮೂದಿಸಿಲ್ಲ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಮತ್ತು ನನ್ನ ಅಣ್ಣ

ಮತ್ತು ತಮ್ಮ ಒಟ್ಟಿಗೇ ವಾಸವಿದ್ದರು ಎಂದರೆ ಸರಿ. ದಾವಾ ಸ್ವತ್ತುಗಳನ್ನು ಅವರೇ ಅನುಭೋಗ ಮಾಡುತ್ತಿದ್ದರು ಮತ್ತು 5 ನೇ ಪ್ರತಿವಾದಿಯ ಗಂಡ ಬದುಕಿರುವವರೆಗೆ ಆತನೇ ಅನುಭೋಗ ಮಾಡುತ್ತಿದ್ದ ಎಂದರೆ ಸರಿ. 5 ನೇ ಪ್ರತಿವಾದಿಯ ಗಂಡನ ಮರಣಾನಂತರ ಆತನ ಹೆಂಡತಿ ಮತ್ತು ಮಗಳು ನನ್ನ ತಾಯಿಯ ಜೊತೆ ವಾಸ ಮಾಡುತ್ತಿದ್ದರು ಎಂದರೆ ಸರಿ. ದಿ.26-11-1989 ರಂದು ನನ್ನ ತಾಯಿ ಮತ್ತು 5 ನೇ ಪ್ರತಿವಾದಿಯ ನಡುವೆ ಪಾಲು ವಿಭಾಗ ಆಗಿರುವುದನ್ನು ಒಪ್ಪುತ್ತೇನೆ, ಆದರೆ ಆ ಸಂಗತಿಯನ್ನು ವಾದಪತ್ರದ 7 ನೇ ಪ್ಯಾರಾದಲ್ಲಿ ನಾನು ಹೇಳಿ ಬರೆಯಿಸಿಲ್ಲ. ಆ ಪಾಲು ವಿಭಾಗದ ಪ್ರಕಾರ ನನ್ನ ತಾಯಿಯ ಹಿಸ್ಸೆಗೆ ಐಟಂ ನಂ.1 ಮತ್ತು 2 ಬಂದಿದ್ದವು ಎಂದರೆ ಸರಿಯಲ್ಲ. ಸದರಿ ಪಾಲು ವಿಭಾಗದ ಬಿ ಷೆಡ್ಯೂಲ್ ಪ್ರಕಾರ 5 ನೇ ಪ್ರತಿವಾದಿಯ ಹಿಸ್ಸೆಗೆ ದಾವಾ ಐಟಂ ನಂ.5 ರಿಂದ 9 ಬಂದಿದ್ದವು ಎಂದರೆ ಸರಿ. ಸದರಿ ಪಾಲು ವಿಭಾಗದ ಪ್ರಕಾರ ಎಂ.ಆರ್.ನಂ.95-1992-93 ರಂತೆ ನನ್ನ ತಾಯಿ ಮತ್ತು 5 ನೇ ಪ್ರತಿವಾದಿ ಅವರ ಹಿಸ್ಸೆಗೆ ಬಂದ ಆಸ್ತಿಗಳ ಖಾತೆಗಳನ್ನು ಮಾಡಿಸಿಕೊಂಡು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ದಿ.26-11-1989 ರ ಪಾಲು ವಿಭಾಗದ ಬಗ್ಗೆ ನಾನೇ ಹೇಳಿದ್ದರೂ ಕೂಡ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1992-93 ರ ಖಾತೆ ಬದಲಾವಣೆಯನ್ನು ಪ್ರಶ್ನಿಸಿ ಇಲ್ಲಿಯವರೆಗೆ ಯಾವುದೇ ದಾವೆ ಹಾಕಿಲ್ಲ ಎಂದರೆ ಹಿಂದೆ ದಾವೆ ಹಾಕಿದ್ದೆ, ಅದನ್ನು ಸಲ್ಲಿಸಿದ್ದ ವಕೀಲರು ತೀರಿಕೊಂಡಿದ್ದಾರೆ. ಆ ದಾವೆಯ ನಂಬರ್ ಏನು ಎಂದರೆ ನಂಬರ್ ಗೊತ್ತಿಲ್ಲ.

6) ಐಟಂ ನಂ.3 ಮತ್ತು 4 ನಮ್ಮ ಕುಟುಂಬಕ್ಕೆ ಹೇಗೆ ಬಂದಿದ್ದವು ಎಂದರೆ ಅವು ನನ್ನ ತಂದೆಯ ಆಸ್ತಿಗಳು. ನನ್ನ ತಾಯಿ 1989 ರಲ್ಲಿ ಪಾಲು ವಿಭಾಗವಾದ ನಂತರ ದಿ.21-07-1993 ರಂದು ಕೃಷ್ಣಮ್ಮನಿಂದ ಕ್ರಯಪತ್ರದ ಮೂಲಕ ಸದರಿ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಐಟಂ ನಂ.3 ಮತ್ತು 4 ನನ್ನ ತಾಯಿಗೆ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಐಟಂ ನಂ.1 ರಲ್ಲಿ 30 ಗುಂಟೆ ಮತ್ತು ಐಟಂ ನಂ.3 ಹಾಗೂ 4 ನ್ನು ನನ್ನ ತಾಯಿ ದಿ.13-09-1993 ರಂದು ವಿಲ್ ಮೂಲಕ 2 ನೇ ಪ್ರತಿವಾದಿಗೆ ಬರೆದಿದ್ದಾರೆ ಎಂದರೆ ಸರಿಯಲ್ಲ. ಐಟಂ ನಂ.1 ರಲ್ಲಿ ನನ್ನ ತಾಯಿಯು ನನ್ನ ಅಕ್ಕ ಮೃತ ರಾಧಮ್ಮನಿಗೆ ಕೂಡ 1 ಎಕರೆಯನ್ನು ವಿಲ್ ಮೂಲಕ ಕೊಟ್ಟಿದ್ದರು ಎಂದರೆ ಹೌದು, 1 ಎಕರೆಯ ಖಾತೆ ನನ್ನ ಅಕ್ಕ ರಾಧಮ್ಮನ ಹೆಸರಿಗೆ ಆಗಿರುವುದು ನಿಜ. ಇದೇ ಸಂಗತಿಯನ್ನು ವಾದಪತ್ರದ 8 ನೇ ಪ್ಯಾರಾದಲ್ಲಿ ನಾನು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಈ ಆಸ್ತಿಗಳು ನನ್ನ ತಾಯಿಗೆ ಸ್ವಯಾರ್ಜಿತ ಆಸ್ತಿಗಳಾಗಿದ್ದು, ಆಕೆ ವಿಲ್ ಮೂಲಕ ಕೊಟ್ಟು ಖಾತೆಗಳಾಗಿರುವ ಕಾರಣ ನನಗೆ ಅವುಗಳ ಮೇಲೆ ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ. 1989 ರಲ್ಲಿ ಪಾಲು ವಿಭಾಗವಾದ ನಂತರ ನನ್ನ ತಾಯಿ ಮತ್ತು 5 ನೇ ಪ್ರತಿವಾದಿ ಪ್ರೇತ್ಯೇಕವಾಗಿ ವಾಸ ಮಾಡುತ್ತಿರುವ ಕಾರಣ ನನಗೆ ಪಾಲು ವಿಭಾಗದ ಹಕ್ಕು ಇರುವುದಿಲ್ಲ ಎಂದರೆ ನಾನೂ ಕೂಡ ತವರು ಮನೆಗೆ ಹೋಗಿ ಬರುವ ಕಾರಣ ಹಕ್ಕು ಇರುತ್ತದೆ. ಸಾಕ್ಷಿಯು ವಾದ ಪತ್ರಕ್ಕೆ ಅವರು ಮಾಡಿರುವ ಸಹಿಗಳನ್ನು ನನ್ನವಲ್ಲವೆಂದು ನಿರಾಕರಿಸಿದ್ದಾರೆ. ನಾನು ದಿ.10-09-1993 ರಂದು ರೂ.60 ಸಾವಿರ ಪಡೆದು ನನಗೆ ಕುಟುಂಬದ ಆಸ್ತಿಗಳಲ್ಲಿ ಯಾವುದೇ ಭಾಗ ಬೇಕಿಲ್ಲವೆಂದು ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿದ್ದೇನೆ ಎಂದರೆ

ಸರಿಯಲ್ಲ. ಹಾಗಿದ್ದರೂ ವಿನಾ ಕಾರಣ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಬದುಕಿದ್ದಾಗ 1993 ರಲ್ಲಿ ಐಟಂ ನಂ.1 ರಲ್ಲಿ 1 ಎಕರೆ 17 ಗುಂಟೆಯನ್ನು ಕಾಂತಮ್ಮನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನೇ ಹಾಜರು ಮಾಡಿದ ನಿ.ಪಿ.8 ರಲ್ಲಿ ಕಾಂತಮ್ಮನ ಹೆಸರಿಗೆ 1 ಎಕರೆ 17 ಗುಂಟೆ ನಮೂದಾಗಿದೆ ಎಂದರೆ ಸುಳ್ಳು. ದಿ.24-08-1993 ರಂದು ನನ್ನ ತಾಯಿ ಐಟಂ ನಂ.1 ರಲ್ಲಿ 20 ಗುಂಟೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರಿಗೆ ದಾನಪತ್ರ ಮಾಡಿಕೊಟ್ಟಿದ್ದು, ಆ ಪ್ರಕಾರ ಸದರಿ ಆಸ್ತಿಯಲ್ಲಿ ಈಗ ಆಸ್ಪತ್ರೆ ಇದೆ ಎಂದರೆ ಸರಿ. ನಾನು ಸದರಿ ಕಾಂತಮ್ಮನನ್ನು ಮತ್ತು ಆರೋಗ್ಯಾಧಿಕಾರಿಗಳನ್ನು ದಾವೆಗೆ ಸೇರಿಸಿಲ್ಲ ಎಂದರೆ ಸುಳ್ಳು. ಬಾಕಿ 30 ಗುಂಟೆಯ ಖಾತೆಯನ್ನು 2 ನೇ ಪ್ರತಿವಾದಿ ತನ್ನ ಹೆಸರಿಗೆ ಮಾಡಿಸಿಕೊಂಡು ಸ್ವಾಧೀನ ಹೊಂದಿದ್ದಾರೆ ಎಂದರೆ ಸುಳ್ಳು. ಐಟಂ ನಂ.2 ಒಟ್ಟು ಎರಡೂವರೆ ಎಕರೆ ಇರುತ್ತದೆ. ಅದರ ವಿಸ್ತೀರ್ಣ 2 ಎಕರೆ 29 ಗುಂಟೆ ಎಂದರೆ ನನಗೆ ಗೊತ್ತಿಲ್ಲ. ಈಗ ಐಟಂ ನಂ.2 ರ ಪಹಣಿ ಯಾರ ಹೆಸರಿಗೆ ಬರುತ್ತಿದೆ ಎಂದು ನನಗೆ ಗೊತ್ತಿಲ್ಲ. ಇದರಲ್ಲಿ ಕೂಡ 1 ಎಕರೆ 30 ಗುಂಟೆಯನ್ನು ನನ್ನ ತಾಯಿ ದಿ.07-06-1993 ರಂದು ಕಾಂತಮ್ಮನಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಕ್ರಯಪತ್ರದ ಪ್ರಕಾರ ಕಾಂತಮ್ಮನೇ ಖಾತೆ ಬದಲಾವಣೆ ಮಾಡಿಸಿಕೊಂಡು ಸ್ವಾಧೀನ ಹೊಂದಿದ್ದಾರೆ ಎಂದರೆ ಅವೆಲ್ಲಾ ಸುಳ್ಳು. ಐಟಂ ನಂ.2 ರ ಬಗ್ಗೆ ಕೂಡ ಕಾಂತಮ್ಮನನ್ನು ದಾವೆಗೆ ಸೇರಿಸಿಲ್ಲ ಎಂದರೆ ಸರಿ. ಬಾಕಿ ವಿಸ್ತೀರ್ಣ ನನ್ನ ಅಕ್ಕ ರಾಧಮ್ಮನ ಹೆಸರಿಗೆ ವಿಲ್ ಮೂಲಕ ಖಾತೆಯಾಗಿದೆ ಎಂದರೆ ಸುಳ್ಳು. ನಾನು ಆ ವಿಚಾರ ಗೊತ್ತಿದ್ದೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗ ಸದರಿ 39 ಗುಂಟೆಯ ಖಾತೆ ರಾಧಮ್ಮನ ಹೆಸರಿನಲ್ಲೇ ಇದೆಯೇ? ಎಂದರೆ ಆಕೆ ಸತ್ತ ನಂತರ ಯಾರ ಹೆಸರಿನಲ್ಲಿ ಬರುತ್ತಿದೆ ಎಂದು ನನಗೆ ಗೊತ್ತಿಲ್ಲ. ಈಗ ಸದರಿ ಆಸ್ತಿಯನ್ನು 7 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದು, ಆಕೆ ಮತ್ತು ರಾಧಮ್ಮ ಅಕ್ಕ-ತಂಗಿಯರು. ಈಗ 7 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದು, ಅದರ ಸರ್ವೆ ನಂಬರ್ 104-3 ಆಗಿದೆ ಎಂದರೆ ಅದೆಲ್ಲಾ ಸುಳ್ಳು.

7) 2008 ರಲ್ಲಿ ನಾನು ನನ್ನ ಅಕ್ಕಂದಿರು ನಾರಾಯಣಮ್ಮ ಮತ್ತು ರಕ್ಮಿಣಮ್ಮ ಇವರನ್ನು ಭಾಗ ಕೇಳಿದ್ದೆ. ದಿನಾಂಕ ಗೊತ್ತಿಲ್ಲ. ಅವರು ಭಾಗ ಕೊಡುವುದಿಲ್ಲ ಎಂದಿದ್ದಕ್ಕೆ ದಾವೆ ಹಾಕಿದೆ. ಅವರೆಲ್ಲಾ ಭಾಗ ಮಾಡಿಕೊಂಡು ಪ್ರತ್ಯೇಕ ವಾಗಿ ವಾಸ ಮಾಡುತ್ತಿದ್ದ ಕಾರಣ ನಾನು ಭಾಗ ಕೇಳುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು 2008 ಕ್ಕಿಂತ ಮುಂಚೆ ಕೂಡ ಭಾಗ ಕೇಳಿದ್ದೆ. ನಾನು ಹಿಂದೆ ಸಲ್ಲಿಸಿದ್ದ ದಾವೆ ಏನಾಯಿತು ಎಂದರೆ ಏನೂ ಆಗಿಲ್ಲ. ನಾನು ಬೆಂಗಳೂರು ಗ್ರಾಮಾಂತರ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಒ.ಎಸ್.ನಂ.755-2000 ದಾವೆಯು ಹಾಜರಾಗದ ಕಾರಣ ವಜಾ ಆಗಿತ್ತು ಎಂದರೆ ಸರಿಯಲ್ಲ. ಆ ದಾವೆ ವಜಾ ಆಗಿದ್ದರೂ ಮತ್ತೆ ತೊಂದರೆ ಕೊಡುವ ಉದ್ದೇಶದಿಂದ ಇನ್ನೊಂದು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯ ಜೀವಿತ ಅವಧಿಯಲ್ಲಿ ಆಕೆ ಮತ್ತು ನನ್ನ ಸಹೋದರರು ಪಾಲು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರಿಂದ ನನಗೆ ಪಾಲು ಕೇಳುವ ಹಕ್ಕು ಮತ್ತು ಪಾಲು ಕೇಳುವ ಅರ್ಹತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಸ್ವಯಾರ್ಜಿತ ಆಸ್ತಿಗಳು ಮತ್ತು ಒಟ್ಟು ಕುಟುಂಬದ ಆಸ್ತಿಯಲ್ಲಿ

ಆಕೆಯ ಹಿಸ್ಸೆಯನ್ನು ವಿಲ್ ಮೂಲಕ 2 ನೇ ಪ್ರತಿವಾದಿಗೆ ಖಾತೆ ಮಾಡಿರುವ ಕಾರಣ ನನಗೆ ಅವುಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಿಲ್ ಮೂಲಕ 2 ನೇ ಪ್ರತಿವಾದಿ ಮಾಡಿಸಿಕೊಂಡ ಖಾತೆಯನ್ನು ಪ್ರಶ್ನಿಸಿ ಈ ದಾವೆ ಬಿಟ್ಟು ಬೇರೆ ಯಾವುದೇ ದಾವೆಯನ್ನು ನಾನು ಹಾಕಿರುವುದಿಲ್ಲ. ನನ್ನ ತಾಯಿ ಆಕೆಯ ಸ್ವಯಾರ್ಜಿತ ಆಸ್ತಿಗಳನ್ನು ವಿಲ್ ಮಾಡಿದ್ದಾರೆ ಎಂದು ಗೊತ್ತಿದ್ದರಿಂದಲೇ ನಾನು ಅದನ್ನು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಖಾತೆ ಮಾಡಿಸಿಕೊಂಡ ಆಸ್ತಿಗಳಲ್ಲಿ 2 ನೇ ಪ್ರತಿವಾದಿಯೇ ಸ್ವಾಧೀನಾನುಭವ ಹೊಂದಿದ್ದು, ನಾನು ಯಾವತ್ತೂ ಸ್ವಾಧೀನ ಹೊಂದಿಲ್ಲ ಮತ್ತು ಅಲ್ಲಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಸ್ವಾಧೀನವಿರುವ ಬಗ್ಗೆ ನಾನು ದಾಖಲೆ ಹಾಜರು ಮಾಡಿದ್ದೇನೆ. ಏನು ದಾಖಲೆ ಕೊಟ್ಟಿದ್ದೇನೆ ಎಂದರೆ ತೋಟ ನೋಡಿಕೊಳ್ಳುತ್ತಿದ್ದೇನೆ. ಯಾವುದೂ ನೀರಾವರಿ ಜಮೀನುಗಳು ಅಲ್ಲವಾದ್ದರಿಂದ ತೋಟ ಮಾಡಿಲ್ಲ ಎಂದರೆ ಹೊಲ ಮಾಡಿದ್ದಾರೆ. ವಿಮಾನ ನಿಲ್ದಾಣದ ಕಾರಣದಿಂದ ಜಮೀನಿಗೆ ಬೆಲೆ ಹೆಚ್ಚಾಗಿರುವುದನ್ನು ಅವಕಾಶವಾಗಿ ಮಾಡಿಕೊಂಡು ಸ್ವಾಧೀನವಿರದಿದ್ದರೂ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲಾ.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**